

# ಸಂತ ಏಕನಾಥ

**ಕಥೆ:** ಆರ್.ವಿ.　　**ಚಿತ್ರ:** ಶಂಕರ್


**1** ಜನಾರ್ದನ ಸ್ವಾಮಿಗಳು ದೊಡ್ಡ ಭಕ್ತರು. ಅವರು ನ್ಯಾಯಮಾರ್ಗದಲ್ಲಿಯೇ ನಡೆಯುತ್ತಿದ್ದರು. ಯುವಕ ಏಕನಾಥನನ್ನು ಅವರ ತಂದೆ, ಜನಾರ್ದನ ಸ್ವಾಮಿಗಳ ಹತ್ತಿರ ಕರೆದುಕೊಂಡು ಹೋದರು. ವಿದ್ಯೆಯನ್ನು ಕಲಿಸುವಂತೆ ಕೇಳಿಕೊಂಡರು.





**2** ಗುರುಗಳು ಬಹಳ ಗಮನವಿಟ್ಟು ಶಿಷ್ಯನಿಗೆ ವಿದ್ಯೆ ಹೇಳಿಕೊಡಲು ಆರಂಭಿಸಿದರು. ಏಕನಾಥನೂ ಬಹಳ ನಿಷ್ಠೆಯಿಂದ ಗುರುಗಳ ಸೇವೆ ಮಾಡಿದನು.





**3** ಅಂದು ಅರ್ಧರಾತ್ರಿಯಾಗಿತ್ತು. ಏಕನಾಥನು ಕಾತರದಿಂದ ಏನನ್ನೋ ಹುಡುಕುತ್ತಿದ್ದನು. ನಂತರ ಒಡನೆಯೇ, ಚಪ್ಪಾಳೆ ಹೊಡೆಯುತ್ತ, ಜೋರಾಗಿ ನಗಲು ಆರಂಭಿಸಿದನು. ಗುರುಗಳು ಎಚ್ಚರಗೊಂಡು, ಅವನು ಮಾಡುವುದನ್ನೇ ಗಮನಿಸುತ್ತಿದ್ದರು.





**4** ಗುರುಗಳ ಅನುಗ್ರಹದಿಂದ ಏಕನಾಥರು ಧ್ಯಾನ ಮಾಡುವುದನ್ನು ಕಲಿತುಕೊಂಡರು. ಕೋಪವನ್ನು ಪೂರ್ತಿಯಾಗಿ ತಡೆದುಕೊಳ್ಳುವುದರಲ್ಲಿಯೂ ಅವರು ಯಶಸ್ವಿಯಾದರು. ಒಂದು ದಿನ ಅವರು ಗಂಗೆಯಲ್ಲಿ ಸ್ನಾನ ಮಾಡಿಕೊಂಡು ಹಿಂದಿರುಗುತ್ತಿದ್ದರು. ಅವರ ಮೇಲೆ ಯಾರೋ ಉಗುಳಿದರು.




**5** ಏಕನಾಥರು ಮತ್ತೆ ಸ್ನಾನ ಮಾಡಿದರು. ಹಿಂತಿರುಗಿ ಬರುವಾಗ, ಆ ವ್ಯಕ್ತಿಯು ಅವರ ಮೇಲೆ ಮತ್ತೆ ಉಗುಳಿದನು. ಅಪಾರ ಸಹನೆಯಿಂದ ಏಕನಾಥರು ಗಂಗೆಯಲ್ಲಿ ಮತ್ತೆ ಸ್ನಾನ ಮಾಡಿದರು.




**6** ಇದೇ ರೀತಿ ೧೦೮ ಸಲ ನಡೆಯಿತು. ಕಡೆಗೆ ಆ ವ್ಯಕ್ತಿಯು ಏಕನಾಥರ ಕಾಲಿಗೆ ಬಿದ್ದು ಕ್ಷಮೆ ಕೇಳಿದನು.





**7** ಸ್ನಾನ ಮುಗಿಸಿದ ನಂತರ ಏಕನಾಥರು ಧ್ಯಾನಮಾಡಲು ತೊಡಗಿದರು. ಆ ಸಂದರ್ಭದಲ್ಲಿ ಸುಡುತ್ತಿದ್ದ ನದಿಯ ಮರಳಿನಲ್ಲಿ ಒಂದು ಮಗು ಒದ್ದಾಡುತ್ತಿರುವುದನ್ನು ಕಂಡರು. ಆ ಮಗುವನ್ನು ಎತ್ತಿಕೊಂಡು ಅದರ ತಂದೆತಾಯಿಗಳಿಗೆ ತಲುಪಿಸಿದರು.





**8** ಆ ಹಳ್ಳಿಯಲ್ಲಿ ರಾಮು ಎಂಬ ಜಾಡಮಾಲಿಯಿದ್ದನು. ಅವನಿಗೆ ಒಳ್ಳೆಯ ಗುಣಗಳಿದ್ದವು. ಅವನು ಒಳ್ಳೆಯತನ ದಿಂದ ನಡೆದುಕೊಳ್ಳುತ್ತಿದ್ದನು. ಒಂದು ದಿನ ಅವನು ಏಕನಾಥರ ಹತ್ತಿರ ಬಂದು, ನಮಸ್ಕಾರ ಮಾಡಿದನು.




**9** ಜಾಡಮಾಲಿಗಳು ವಾಸವಾಗಿದ್ದ ಕಾಲೋನಿಯಲ್ಲಿ ಅಂದು ಸಂಭ್ರಮವೋ ಸಂಭ್ರಮ. ಅವರು ಬೀದಿಯನ್ನು ತಳಿರುತೋರಣಗಳಿಂದ ಅಲಂಕರಿಸಿದರು. ರಾಮು ತುಂಬು ಭಕ್ತಿಯಿಂದ ಏಕನಾಥರಿಗೆ ಊಟವನ್ನು ಬಡಿಸಿದನು.





**10** ಏಕನಾಥರು ಹುಟ್ಟಿದ್ದು ಪೈಠಣ ಎಂಬ ಊರಿನಲ್ಲಿ. ಅಲ್ಲಿ ಒಬ್ಬ ಬಡ ಮುದುಕಿ ಇದ್ದಳು. ಅವಳಿಗೆ ಒಂದು ಸಾವಿರ ಜನರಿಗೆ ಊಟ ಹಾಕಬೇಕು ಎನ್ನುವ ಇಚ್ಛೆ ಉಂಟಾಯಿತು.




**11** ಬಹಳ ಸಂತೋಷದಿಂದ ಆ ವೃದ್ಧ ಮಹಿಳೆ ಏಕನಾಥರ ಹತ್ತಿರ ಹೋಗಿ ಅವರನ್ನು ಊಟಕ್ಕೆ ಆಹ್ವಾನಿಸಿದಳು. ಏಕನಾಥರ ಮಗ ಹರಿಪಂಡಿತನಿಗೆ ಇದು ಇಷ್ಟವಾಗಲಿಲ್ಲ. ಆದರೂ ಅವನು ತನ್ನ ತಂದೆಯ ಜೊತೆಗೆ ಹೋದನು. ಊಟವಾದ ಮೇಲೆ...




**12** ಹರಿ ಏಕನಾಥರ ಎಲೆಯನ್ನು ತೆಗೆದೊಡನೆ, ಅಲ್ಲಿ ಇನ್ನೊಂದು ಎಲೆ ಕಂಡಿತು.




**13** ಹರಿ ಆ ಎಲೆಯನ್ನು ತೆಗೆದೊಡನೆ, ಅದರ ಕೆಳಗೆ ಇನ್ನೊಂದು ಎಲೆ ಕಾಣಿಸಿಕೊಂಡಿತು. ಹೀಗೆ ಸಾವಿರ ಎಲೆಗಳು ಕಾಣಿಸಿಕೊಂಡವು.



ಗುರುಗಳೇ, ನೀವು ಸಾಧಾರಣ ಮನುಷ್ಯರಲ್ಲ. ನನಗೆ ಮುಕ್ತಿಯನ್ನು ನೀಡಲು ಬಂದಿರುವ ದೇವರೇ ನೀವು.

**14** ಏಕನಾಥರು ಭಕ್ತರಷ್ಟೇ ಅಲ್ಲ. ಅವರೊಬ್ಬ ಅತ್ಯುತ್ತಮ ಲೇಖಕರೂ, ಸಮಾಜ ಸುಧಾರಕರೂ ಆಗಿದ್ದರು. ವಾರಾಣಸಿಯಲ್ಲಿ ಅವರು ರಚಿಸಿದ ಪುಸ್ತಕಗಳನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ, ಗೌರವಿಸಲಾಯಿತು.




**15** ಏಕನಾಥರು ಮಹಾರಾಷ್ಟ್ರದಲ್ಲಿ ಕಳ್ಳರನ್ನೂ ಸುಧಾರಣೆ ಮಾಡಿದರು. ಇವತ್ತಿಗೂ ಅವರ ಭಜನೆಗಳನ್ನು ಉತ್ತರ ಭಾರತದಾದ್ಯಂತ ಹಾಡುತ್ತಾರೆ.

